**ಅಪರ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.**

**ಸಿ.ಸಿ. ಸಂಖ್ಯೆಃ 4/2024**

ಫಿರ್ಯಾದುದಾರರು : ಶ್ರೀ ಸ್ವಾಮಿ ಸಿ.
ಬಿನ್ ಲೇಟ್ ಚಿಕ್ಕಜವರಯ್ಯ,
ವಯಸ್ಸು ಸುಮಾರು **37** ವರ್ಷ,
ವಾಸಃ ಬಿಳಿಕೆರೆ ಗ್ರಾಮ ಮತ್ತು ಅಂಚೆ,
ಬಿಳಿಕೆರೆ ಹೋಬಳಿ,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

ವಿರುದ್ಧ,

ಆರೋಪಿ/ಗಳು : ಶ್ರೀ ಸೋಮನಾಯಕ **@** ಸೋಮು
ಬಿನ್ ತಿಮ್ಮನಾಯಕ
ವಯಸ್ಸು ಸುಮಾರು 48 ವರ್ಷ,
ವಾಸಃ ನಾಗವಾಲ ಗ್ರಾಮ ಮತ್ತು ಅಂಚೆ,
ಇಲವಾಲ ಹೋಬಳಿ,
ಮೈಸೂರು ತಾಲ್ಲೂಕು ಮತ್ತು ಜಿಲ್ಲೆ.

**ಆಪಾದನೆ**

ಆರೋಪಿಯಾದ ನೀವು ದಿನಾಂಕ 26.07.2023 ರಂದು ಫಿರ್ಯಾದುದಾರರಿಂದ ನಿಮ್ಮ ಕಾನೂನು ಬದ್ಧ ಅವಶ್ಯಕತೆಗಾಗಿ ಅಂದರೆ ಇಟ್ಟಿಗೆ ಕಾರ್ಖಾನೆಯನ್ನು ಅಭಿವೃದ್ಧಿಪಡಿಸಲು ರೂ.5,00,000/- ಹಣವನ್ನು ಸಾಲವಾಗಿ ಪಡೆದು, ಸದರಿ ಸಾಲದ ಹಣವನ್ನು ಮರುಪಾವತಿಸಲು 26-10-2023 ರ ದಿನಾಂಕ ಇರುವ ರೂ.5,00,000/- ದ ನವನಗರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್, ಕೆ.ಆರ್. ನಗರ ಶಾಖೆ ಇಲ್ಲಿಗೆ ಸೇರಿದ ಚೆಕ್ ಸಂಖ್ಯೆ - 231220 ಅನ್ನು ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದುದಾರರು ತಮ್ಮ ಬ್ಯಾಂಕ್ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, ಚಲ್ಲಹಳ್ಳಿ ಶಾಖೆ, ಹುಣಸೂರು ತಾಲ್ಲೂಕು ಇಲ್ಲಿಗೆ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ, ಸದರಿ ಚೆಕ್ಕು **"Funds Insufficient"** ಎಂಬ

ಹಿಂಬರಹದೊಂದಿಗೆ ದಿಃ 06-11-2023 ರಂದು ವಾಪಾಸಾಗಿರುತ್ತದೆ. ಆದ್ದರಿಂದ ಫಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿಃ 10.11.2023 ರಂದು ನೊಂದಾಯಿತ ಅಂಚೆ ಮೂಲಕ ನೊಟೀಸನ್ನು ಕಳುಹಿಸಿದ್ದು, ಸದರಿ ನೋಟೀಸ್ ನಿಮಗೆ ದಿಃ 16.11.2020 ರಂದು ಜಾರಿಯಾಗಿದ್ದರೂ ಸಹ ನೀವು ಇದುವರೆವಿಗೂ ಫಿರ್ಯಾದುದಾರರಿಗೆ ಚೆಕ್ಕಿನಲ್ಲಿ ನಮೂದಿಸಿದ ಹಣವನ್ನಾಗಲೀ ಅಥವಾ ಸದರಿ ನೋಟೀಸಿಗೆ ಪ್ರತ್ಯುತ್ತರವನ್ನಾಗಲೀ ನೀಡಿರುವುದಿಲ್ಲ. ಆದಕಾರಣ ನೀವು ಎನ್.ಐ ಆ್ಯಕ್ಟ್ ಕಲಂ **138** ರಂತೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಮಾಡಲಾಗಿದೆ.

ಮೇಲ್ಕಂಡ ಅಪರಾದವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ, ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡುತ್ತೀರಿ.

ಪ್ರಶ್ನೆ **1.** ಇದೀಗ ಓದಿ ವಿವರಿಸಿದ ಆಪಾದನೆ ನಿಮಗೆ ಅರ್ಥವಾಯಿತೆ**?**

ಉತ್ತರಃ

ಪ್ರಶ್ನೆ **2.** ಈ ಆಪಾದನೆಯ ಬಗ್ಗೆ ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಯಾವುದಾದರೂ ಪ್ರತಿ ರಕ್ಷಣೆ ಇದೆಯೇ**?**

ಉತ್ತರಃ

ದಿಃ **20.07.2024** **(ಪೂಜಾ ಬೆಳಕೇರಿ )**

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ದಂಢಾಧಿಕಾರಿಗಳು, ಹುಣಸೂರು.